ಎಂಟು ದಿನಗಳು ಸತತವಾಗಿ ಚಿತ್ರಿಸಿ ಮಗುವನ್ನು ಸೊಂಟದಲ್ಲೆತ್ತಿಕೊಂಡ ಮಂಗಳೆಯ ಭಾವಚಿತ್ರ ರಚಿಸಿದೆ. ಮನೆಯವರಿಗೆಲ್ಲಾ ಅತೀವ ಆನಂದ.

ಈ ಮಧ್ಯೆ ನನ್ನ ತಂದೆಗೂ ಸಂತಸ, ಸಂಸ್ಕೃತ ವೇದ ಪಾಠಗಳು ಮತ್ತೆ ಪ್ರಾರಂಭವಾದುವೆಂದು. ಮಾವನ ಅಪ್ಪಣೆ ಪಡೆದು ಕುಲದೇವತೆಯಾದ ಮಾಕಾಂಬಾ ದೇವಾಲಯಕ್ಕೆ ನನ್ನ ಗೆಳೆಯರೊಂದಿಗೆ ಒಂದು ತಿಂಗಳ ಕಾಲ ಹೋಗಿಬಂದೆ. ಈ ಸಮಯದಲ್ಲಿ ನಮಗೆ ತಿರುವನಂತಪುರದ ಅರಮನೆಯಿಂದ ಕರೆಬಂತು. ರಾಜ ಮನೆತನದಿಂದ ತೈಲಚಿತ್ರಗಳನ್ನು ತಯಾರಿಸುವ ಸಲುವಾಗಿ ನನ್ನನ್ನು ಕರೆಸಿ ಮಡತು ಮಡೋಹಂ ಮನೆಯಲ್ಲಿ ಇಳಿಸಿದರು. ಜೊತೆಗೆ ಪಾಚಾನ್ ಹಾಗೂ ಇನ್ನಿತರ ಆಳುಗಳಿದ್ದರು.

ಒಮ್ಮೆ ರಾಜ ಆಯಿಲ್ಯ ತಿರುನಾಳ್ ನನ್ನ ಚಿತ್ರಗಳನ್ನು ನೋಡಲು ಬಂದವರು ಹೇಳಿದರು. 'ನಾನು ನಿನಗೆ ತೋರುತ್ತಿರುವ ಅಭಿಮಾನವನ್ನು ಕಂಡು ನಾಯಕರಿಗೆ ಹೊಟ್ಟೆಕಿಚ್ಚಾಗಿದೆ. ನಾನು ಇದಕ್ಕಿಂತ ಚೆನ್ನಾಗಿ ಚಿತ್ರಿಸುತ್ತಿದ್ದೆ. ಆದರೆ ನನಗೆ ರವಿವರ್ಮನಿಗೆ ಸಿಕ್ಕ ಪ್ರೋತ್ಸಾಹ ಸಿಗುತ್ತಿಲ್ಲ' ಎಂದರು. ನೋಡು ರವಿವರ್ಮ! ಯಾರೊಬ್ಬನೂ ಹಣ ಸಿಗುವುದೆಂಬುದಕ್ಕಾಗಿ ಒಳ್ಳೆಯ ಚಿತ್ರಕಲಾವಿದನಾಗಲಾರ, ನಾಯಕರಾಗಲೀ, ಬ್ರೂಕ್ಸ್, ಜಾನ್ಸನ್‌ರಾಗಲೀ ನಿನಗೆ ಏನನ್ನೂ ಹೇಳಿಕೊಡಲಿಲ್ಲ. ಅವರನ್ನು ನೋಡುತ್ತಲೇ ನೀನು ಕಲಿತೆ, ದೊಡ್ಡ ಕಲಾವಿದನಾದೆ. ಹಾಗೆಂದು ನಾನು ಅವರ ಅರಮನೆಯ ಆಸ್ಥಾನ ಕಲಾವಿದರ ಸ್ಥಾನವನ್ನು ಕಸಿದುಕೊಂಡಿಲ್ಲ. ಎಷ್ಟಾದರೂ ನೀನು ನನ್ನ ಬಂಧುವಲ್ಲವೆ! ಆದ್ದರಿಂದ ನಿನ್ನಲ್ಲಿ ನನಗೆ ಅಭಿಮಾನ ಹೆಚ್ಚು' ಎಂದರು.

ಹಾಗೆ ಇತರ ಚಿತ್ರಗಳನ್ನು ನೋಡುತ್ತಿದ್ದವರು ಅರ್ಧ ಬರೆದಿದ್ದ ಕಾಮಿನಿಯ ಚಿತ್ರವನ್ನು ನೋಡಿ 'ಇದನ್ನೇಕೆ ಪೂರ್ತಿ ಮಾಡಿಲ್ಲ? ತುಂಬಾ ಸುಂದರವಾಗಿದೆಯಲ್ಲ!'

'ಏನೋ ಒಂದು ರೀತಿಯ ಮಾನಸಿಕ ತುಮುಲವಾಯಿತು ಈ ಭಾವಚಿತ್ರದಿಂದ'

'ಪುರುವಿಗೆ ಬೇಸರವಾಯಿತೆಂದಲ್ಲವೆ?'

'ನಿಮಗೆ ಹೇಗೆ ತಿಳಿಯಿತು?'

'ಅರಮನೆಯ ವಿಚಾರಗಳು ಹೆಚ್ಚು ದಿನ ರಹಸ್ಯವಾಗಿ ಉಳಿಯುವುದಿಲ್ಲ, ನನಗೆ ತಿಳಿದಿದೆ. ಕಾಮಿನಿಯೇ ಹೇಳಿದಳು. ರಾಣಿ ಸಾಹೇಬರು ಇಬ್ಬರು ನಾಯರ್ ಹುಡುಗಿಯರನ್ನು ಕರೆಸಿಕೊಂಡಿದ್ದಾರೆ. ಅದರಲ್ಲೊಬ್ಬಳು ಕಾಮಿನಿ'. ನನ್ನ ಮುಖದಲ್ಲಿ ಕಂಡ ಹತ್ತಿಕ್ಕಲಾರದ ಹರ್ಷವನ್ನು ಮಹಾರಾಜರೂ ಗುರುತಿಸಿಬಿಟ್ಟರು.

'ಈ ಸಂತೋಷದಲ್ಲಿ ಭಾವಚಿತ್ರ ಮುಗಿಸುವುದನ್ನು ಮರೆತು ಬಿಡಬೇಡ' ಎನ್ನುತ್ತಾ ನನ್ನ ಬೆನ್ನು ತಟ್ಟಿದರು. 'ಮದರಾಸಿನಲ್ಲಿ ಒಂದು ಚಿತ್ರಕಲಾ ಪ್ರದರ್ಶನ ಏರ್ಪಾಡಾಗಿದೆ. ಪ್ರಪಂಚದ ಎಲ್ಲಾ ಕಡೆಗಳಿಂದಲೂ ಚಿತ್ರಕಲಾವಿದರು ಬರುತ್ತಾರೆ. ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸುತ್ತಾರೆ. ನಮ್ಮ ನಾಯಕರೂ ಹೋಗುತ್ತಾರೆ. ನಿನ್ನದನ್ನೂ ಕಳುಹಿಸೋಣ' ಎಂದರು.

ಕಾಮಿನಿಯನ್ನು ರೂಪದರ್ಶಿಯಾಗಿಟ್ಟುಕೊಂಡು 'ನಾಯರ್ ಸುಂದರಿ'ಯ ಚಿತ್ರಗಳನ್ನು ಮುಗಿಸಿದೆ. ಅದೇ ದಿನ ನನ್ನ ಮಾವ ರಾಜರಾಜವರ್ಮ ಅನಿರೀಕ್ಷಿತವಾಗಿ ಬಂದರು. ರಾಜ ಮನೆತನದವರ ಭಾವಚಿತ್ರಗಳನ್ನು ನೋಡಿ ತುಂಬಾ ಸಂತಸಗೊಂಡರು.

'ನನಗೂ ಚಿಕ್ಕಂದಿನಲ್ಲಿ ಇಂತಹ ಬಣ್ಣಗಳು, ಕುಂಚಗಳು, ಪೋಷಕರು ಸಿಕ್ಕಿದರೆ ನಾನೂ ನಿನ್ನಂತಹ ದೊಡ್ಡ ಕಲಾವಿದನಾಗುತ್ತಿದ್ದೆ' ಎಂದರು ಭಾವುಕರಾಗಿ. 'ಮಾವ ನೀವಲ್ಲವೆ ನನ್ನ ಮೊದಲ ಗುರು? ನನ್ನ ಪ್ರತಿಭೆಯನ್ನು ದೇವಸ್ಥಾನದ ಗೋಡೆಗಳ ಮೇಲೆ ಗುರ್ತಿಸಿ ನಿಮ್ಮ ಹಳೆಯ ಕ್ಯಾನ್ವಾಸ್‌ಗಳ ಹಿಂದೆ ಅಭ್ಯಾಸ ಮಾಡಿಕೊಳ್ಳಲು ಕೊಟ್ಟವರು? ಮಹಾರಾಜನಿಗೆ ನನ್ನನ್ನು ಪರಿಚಯಿಸಿ, ಒಳ್ಳೆಯ ಉಪಾಧ್ಯಾಯರ ಶಿಕ್ಷೆಯಲ್ಲಿ ಬಿಟ್ಟವರು? ನೀವಿಲ್ಲದಿದ್ದರೆ ನಾನು ಹೀಗಾಗುತ್ತಿದ್ದೆ?' ಎಂದೆ ತುಂಬಿದ ಹೃದಯದಿಂದ.

'ಕೊಚ್ಚ್, ಒಬ್ಬ ರಾಜಕುಮಾರ ರಾಜಮನೆತನದಲ್ಲಿ ಹುಟ್ಟುವುದರಿಂದ ರಾಜನಾಗಬಲ್ಲ. ಆದರೆ ಜನರ ಮನಸ್ಸನ್ನು ಗೆದ್ದು 'ರಾಜಕಲಾವಿದ' ನಾಗುವುದು ಸಣ್ಣ ಮಾತಲ್ಲ. ಬಣ್ಣಗಳು, ಕುಂಚಗಳನ್ನು ಹಿಡಿದುಬಿಟ್ಟರೆ ಅವನು ಶ್ರೇಷ್ಠ ಕಲಾವಿದನಾಗುವುದಿಲ್ಲ. ಭಗವಂತನೇ ಒಬ್ಬ ದೊಡ್ಡ ಚಿತ್ರಕಲಾವಿದ. ಅವನ ಕುಂಚದಿಂದ ಪ್ರತಿ ಹೃದಯದಲ್ಲೂ ಒಂದು ದೈವತ್ವವನ್ನು ತುಂಬುತ್ತಾನೆ. ಹಲವರು ಮಾತ್ರ ಆ ದೈವತ್ವವನ್ನು ಕಂಡುಕೊಳ್ಳುತ್ತಾರೆ, ಅಂಥವರಲ್ಲಿ ನೀನೊಬ್ಬ. ಆದರೆ ಕಲಾವಿದರಿಗೆ ಸಲ್ಲಬೇಕಾದ ಮರ್ಯಾದೆಯನ್ನು ಈ ಸಮಾಜ ನೀಡುತ್ತಿಲ್ಲ. ಹಾಗೆಂದು ನಿರಾಶನಾಗಬೇಡ. ನಿರ್ವಂಚನೆಯಿಂದ ನಿನ್ನ ಕೆಲಸ ಮುಂದುವರೆಸು. ನಿನ್ನ ಭವಿಷ್ಯ ಉಜ್ವಲವಾಗಲು ನನ್ನ ಆಶೀರ್ವಾದವಿದೆ'.

ನಾನು ಭಕ್ತಿಯಿಂದ ಅವರ ಪಾದ ಮುಟ್ಟಿ ನಮಸ್ಕರಿಸಿದೆ. ಮಾವ ನನ್ನನ್ನು ತಬ್ಬಿಕೊಂಡು 'ನನ್ನಂಥ ಸೋತ ಚಿತ್ರಗಾರ ಒಬ್ಬ ಯಶಸ್ವಿ ಚಿತ್ರಕಲಾವಿದನಿಗೆ ಬೋಧಿಸುತ್ತಿರುವುದು ವಿಚಿತ್ರವಲ್ಲವೆ? ಬದುಕಿನ ಎಂತಹ ಕಷ್ಟದಲ್ಲೂ ನಿನ್ನ ಕಲೆಯನ್ನು ಕೈಬಿಡಬೇಡ' ಎಂದರು. ಅಷ್ಟರಲ್ಲಿ ಮಹಾರಾಜರ ಕರೆ ಬಂದಿತೆಂದು ಇಬ್ಬರೂ ಅರಮನೆಗೆ ಹೊರಟೆವು.

## ಮಹಾರಾಜ ಆಯಿಲ್ಯ ತಿರುನಾಳ್

ರಾಜರಾಜವರ್ಮ, ರವಿವರ್ಮ ಇಬ್ಬರೂ ನನ್ನ ಆಸ್ಥಾನಕ್ಕೆ ಬಂದಾಗ ನಾನು ಸಿಂಹಾಸನದಲ್ಲಿ ಮಂಡಿಸಿದ್ದೆ. ಜಾಜಿಮಲ್ಲಿಗೆಯ ಸುಗಂಧ ಇಡೀ ಅರಮನೆಯ ತುಂಬಾ ಹರಡಿತ್ತು. ಅರಮನೆಯ ಆಸ್ಥಾನದಲ್ಲಿ ಚಿತ್ರಕಾರ ನಾಯಕರೂ ಇದ್ದರು. ನಾನು ಆಯೋಜಿಸಿದ್ದ ಆ ವಿಶೇಷ ದರ್ಬಾರಿನ ವಿಷಯವೇನೋ ಎಂಬ ಕುತೂಹಲ ಎಲ್ಲರ ಮುಖದಲ್ಲೂ ಮೂಡಿತ್ತು.

ನಾನು ಗತ್ತಿನಿಂದ ಹೇಳಿದೆ 'ರಾಜಾ ರವಿವರ್ಮ, ಒಂದು ಹೆಜ್ಜೆ ಮುಂದೆ ಬರುತ್ತೀಯಾ?'

ರವಿವರ್ಮ ಒಂದು ರೇಶಿಮೆ ಜುಬ್ಬಾ, ರೇಶಿಮೆ ಪಂಚೆ ಧರಿಸಿ, ಸಾಂಪ್ರದಾಯಿಕ ಪೇಟ ಧರಿಸಿದ್ದ. ಕಿವಿಗಳಲ್ಲಿ ವಜ್ರದ ಕಡುಕು ಧರಿಸಿ, ಹಣೆಗೆ ಚಂದನ ಇಟ್ಟುಕೊಂಡಿದ್ದ. ಅವನ ತೆಳು ಮೀಸೆ ಅವನ ಮುಖಕ್ಕೆ ಒಂದು ಅಪೂರ್ವ ಶೋಭೆ ನೀಡಿತ್ತು. ನಾನವನನ್ನು 'ರಾಜಾ ರವಿವರ್ಮ' ಎಂದು ಕರೆದಾಗ ಅವನು ಸ್ವಲ್ಪ ಬೆಚ್ಚಿದ. ಗೌರವದಿಂದ ಸಿಂಹಾಸನಕ್ಕೆ ವಂದಿಸಿದ.

'ಈ ದರ್ಬಾರ್ ನಿನ್ನ ಗೌರವಾರ್ಥವಾಗಿಯೇ ಆಯೋಜಿಸಿದ್ದೇನೆ. ಇದು ನಮ್ಮಿಬ್ಬರ ಸಂಬಂಧದಿಂದ ಅಲ್ಲ. ನೀನಾಗಿ ಸಂಪಾದಿಸಿಕೊಂಡ ಗೌರವವಿದು. ನಿನ್ನ ಪ್ರತಿಭೆಯಿಂದ ದೊರಕಿಸಿಕೊಂಡ ಸನ್ಮಾನ. ಈ ದಿನ ನಾನು ನಿನಗೆ ರಾಜಮನೆತನದ 'ರಾಜ' ಎಂಬ ಗೌರವ ಬಿರುದನ್ನು ದಯಪಾಲಿಸಲು ಇಚ್ಛಿಸುತ್ತೇನೆ' ಎಂದೆ ಮುಗುಳ್ನಗುತ್ತಾ.

ದರ್ಬಾರಿನಲ್ಲಿದ್ದವರೆಲ್ಲಾ ದಂಗು ಬಡಿದಂತಿದ್ದರು. ತಂಜಾವೂರು ಅರಮನೆಯಲ್ಲಿ ಬಹುಕಾಲದಿಂದ ಕಾಣಸಿಗದ ಅಪರೂಪದ ಬಿರುದಾಗಿತ್ತು ಅದು. ನಾನು ದಿವಾನ್ ಮಾಧವರಾಯರ ಕಡೆ ತಿರುಗಿದೆ. ಅವರು ಅಲಂಕೃತವಾದ ದೊಡ್ಡ ಹರಿವಾಣವನ್ನು ತಂದು ಅದರ ಮೇಲೊದಿಕೆ ಸರಿಸಿದರು. ಅದರಲ್ಲಿದ್ದ ಸುಂದರ ಚಿನ್ನದ ಕಡಗವನ್ನು ರವಿವರ್ಮನ ಕೈಗೆ ತೊಡಿಸುತ್ತಾ ಹೇಳಿದೆ 'ರವಿವರ್ಮ, ಇದು ಬರಿಯ ಚಿನ್ನದ ಆಭರಣ ಎಂದುಕೊಳ್ಳಬೇಡ, ಇದು ನಿನ್ನ ಹಿರಿಮೆ, ಕಲೆ ಹಾಗೂ ಪರಿಶ್ರಮದ ದ್ಯೋತಕ. ಈ ಗೌರವದಿಂದ ನಿನ್ನ ಹೊಣೆಗಾರಿಕೆ ಇನ್ನೂ ಹೆಚ್ಚಾಗಿದೆ. ನಿನಗೆ ಹಾಗೂ ತಂಜಾವೂರು ಸಂಸ್ಥಾನಕ್ಕೆ ದೊಡ್ಡ ಹೆಸರು ತರುವ ಜವಾಬ್ದಾರಿ ಇನ್ನು ಮೇಲೆ ನಿನ್ನ ಕಲೆಗಿದೆ. ಇದನ್ನು ನಿಭಾಯಿಸಲು ಆ ಪದ್ಮನಾಭಸ್ವಾಮಿ ನಿನಗೆ ಶಕ್ತಿ ನೀಡಲಿ. ನಮ್ಮ ಪ್ರೀತಿ, ವಿಶ್ವಾಸ, ಕೃತಜ್ಞತೆಗಳ ಹಾಗೂ ನಿನ್ನ ಜವಾಬ್ದಾರಿಯ ಸಂಕೇತ ಇದು ಎಂದು ಭಾವಿಸಿಕೋ. ನೀನು ಈ ಬಿರುದನ್ನು ಅನ್ವರ್ಥವಾಗಿಸಿಕೊಂಡು ಕಲಾವಿದರಲ್ಲಿ 'ರಾಜನಾಗು, ರಾಜಕಲಾವಿದನಾಗು ಎಂದು ಹಾರೈಸುತ್ತೇವೆ' ಎಂದೆ.

ಈ ಅನಿರೀಕ್ಷಿತ ಗೌರವದಿಂದ ರವಿವರ್ಮ ಮೂಕನಾದ. ನನ್ನ ಕಾಲಿಗೆ ಬಿದ್ದ. ನಾನು ಆನಂದಬಾಷ್ಪಗಳೊಂದಿಗೆ ಅವನನ್ನು ಮೇಲೆಬ್ಬಿಸಿ 'ಏಳು ರಾಜಾರವಿವರ್ಮ ನಿನ್ನಂಥ ಕಲಾವಿದರಿಗೇ ಭಾವನೆಗಳನ್ನು ಹೊರಸೂಸಲು ಸಾಧ್ಯ. ಆದರೆ ನಮ್ಮಂಥ ಮಹಾರಾಜರು ಸಿಂಹಾಸನಕ್ಕೆ ನೀಡಬೇಕಾದ ಮರ್ಯಾದೆಯೊಂದಿದೆ. ಆದ್ದರಿಂದ ಹಾಗೆ ಮಾಡುವಂತಿಲ್ಲ' ಎನ್ನುತ್ತಾ ದರ್ಬಾರಿನಿಂದ ಹೊರಬಿದ್ದೆ. ಹೋಗುವಾಗ ಓರೆಗಣ್ಣಿನಿಂದ ರಾಮಸ್ವಾಮಿ ನಾಯಕರು ರವಿವರ್ಮನನ್ನು ಅಭಿನಂದಿಸದೆಯೇ ಆಸ್ಥಾನದಿಂದ ಹೊರಹೋದದ್ದನ್ನೂ ಗಮನಿಸಿದೆ ಎಂತಲೇ ರವಿವರ್ಮನಿಗೆ 'ಕೀರ್ತಿ ಹೆಚ್ಚಿದಂತೆಲ್ಲಾ ನಿನ್ನ ಸುತ್ತ ಶತ್ರುಗಳೂ ಹೆಚ್ಚುತ್ತಾರೆ. ಪ್ರತಿಯೊಬ್ಬ ಕಲಾವಿದನೂ ತನ್ನ ಕಲೆಯ ಔನ್ನತ್ಯಕ್ಕೆ ಇಂಥದ್ದೊಂದು ಬೆಲೆ ತೆರಬೇಕಾಗುತ್ತದೆ' ಎಂದು ಎಚ್ಚರಿಸಿದೆ.

ಅಂದು ರವಿವರ್ಮನ ಗೌರವಾರ್ಥವಾಗಿ ಏರ್ಪಡಿಸಿದ್ದ ಭಾರೀ ಔತಣಕೂಟದಲ್ಲಿ ನನ್ನ ತಮ್ಮ, ಯುವರಾಜ ವಿಶಾಖಂ ತಿರುನಾಳ್